ಬೆಂಗಳೂರು
ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
BENGALURU
CITY UNIVERSITY
Jnanajyothi Central College Campus, Dr. B.R Ambedkar Veedhi,
Bengaluru-560001, Ph. No.080-22131385 E-Mail ID: registrar@bcu.ac.in

**ಸಂಖ್ಯೆ:ಬಿಸಿಯು/ವಿ.ವೇ.ಶಾ/ಸಅನೇ/ವಿವೇತಂ/2024-25** | 203 **ದಿನಾಂಕ:09.08.2024**

**ರವರಿಗೆ,**

**ಎಲ್ಲಾ ಪ್ರಾಂಶುಪಾಲರುಗಳು,**
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಸಂಯೋಜಿತ ಕಾಲೇಜುಗಳು,
ಬೆಂಗಳೂರು.

**ಮಾನ್ಯರೇ,**

**ವಿಷಯ:** 2024-25ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಮಾಹಿತಿ ನೀಡಲು ಸಬಲೀಕರಣ ಅಧಿಕಾರಿ (Empowerment Officer)ಯನ್ನು ನೇಮಕ ಮಾಡುವ ಬಗ್ಗೆ ಹಾಗೂ ವಿದ್ಯಾರ್ಥಿಗಳು ಕಾಲೇಜಿಗೆ ದಾಖಾಲಾದ ತಕ್ಷಣವೇ ವಿದ್ಯಾರ್ಥಿಗಳ ಬೋನಾಫೈಡ್ ವಿವರಗಳನ್ನು ವಿಶ್ವವಿದ್ಯಾನಿಲಯದ ಮೂಲಕ ವಿದ್ಯಾರ್ಥಿ ವೇತನ ತಂತ್ರಾಂಶ(SSP)ಕ್ಕೆ ವರ್ಗಾವಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ:-

**ಉಲ್ಲೇಖ: 1.** ಕರ್ನಾಟಕ ಸರ್ಕಾರದ ನಡವಳಿಗಳು ಸಕಇ, ರವರ ಪ್ರಸ್ತಾವನೆ ಸಂಖ್ಯೆ:
SWD/EDU/ED3/107/2023 -24/CN.No1.1130641
**2.** ಸ.ನಿ/ಸಕಇ/ಬೆಂ(ಉ)/ಸಿಆರ್/2023-24 ದಿನಾಂಕ:05/08/2024

**********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ,2024-25ನೇ ಸಾಲಿನಲ್ಲಿ ದಾಖಾಲಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಆನ್-ಲೈನ್ ಮೂಲಕ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (SSP) ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿರುವ ಸಂಯೋಜಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಸಲುವಾಗಿ ಹಾಗೂ ಸದರಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಕೊನೆಯ ಹಂತದ ವರೆವಿಗೂ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನವನ್ನು ನೀಡಲು ಪ್ರತಿಯೊಂದು ಕಾಲೇಜಿನಿಂದ ಒಬ್ಬ ಜವಾಬ್ದಾರಿ ಅಧಿಕಾರಿಯನ್ನು ಸಬಲೀಕರಣ ಅಧಿಕಾರಿ (Empowerment Officer) ಯನ್ನಾಗಿ ನೇಮಿಸಿ ಮಾಹಿತಿ ನೀಡುವಂತೆ ಉಲ್ಲೇಖ 1 ಮತ್ತು 2 ರಲ್ಲಿ ಸೂಚಿಸಲಾಗಿದೆ.

ಈ ವಿಷಯದಲ್ಲಿ ಕಾಲೇಜುಗಳಲ್ಲಿ ಸಬಲೀಕರಣ ಅಧಿಕಾರಿ(Empowerment Officer) ಯನ್ನು ನೇಮಿಸಿರುವ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ವರದಿ ನೀಡಿರುವುದಿಲ್ಲ. ಆ ಕಾರಣ ಸದರಿ ಕಾರ್ಯವನ್ನು ತ್ವರಿತವಾಗಿ ಮಾಡುವಂತೆ ಪ್ರಾಂಶುಪಾಲರುಗಳ ಗಮನಕ್ಕೆ ತರಲಾಗಿದೆ. ಮುಂದುವರೆದು ವಿದ್ಯಾರ್ಥಿಗಳು ಕಾಲೇಜಿಗೆ ದಾಖಾಲಾದ ತಕ್ಷಣವೇ ವಿದ್ಯಾರ್ಥಿಗಳ ಬೋನಾಫೈಡ್ ಮಾಹಿತಿಯನ್ನು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ(SSP)ಕ್ಕೆ ಸಲ್ಲಿಸಬೇಕಾಗಿರುತ್ತದೆ. ಕಾಲೇಜಿನಿಂದ ನಿಯೋಜಿತಗೊಂಡ ಸಬಲೀಕರಣ ಅಧಿಕಾರಿಯವರು ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಬರುವವರೆವಿಗೂ ಕಾಯದೇ ವಿದ್ಯಾರ್ಥಿಗಳ ಮಾಹಿತಿಯನ್ನು SSP ನೊಂದಣಿ ಸಂಖ್ಯೆಯೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು

ಕಳೆದ ಸಾಲಿನಲ್ಲಿ ಬಿ.ಇಡಿ ಕೋರ್ಸಿಗೆ ಸಂಬಂಧಿತ ಕೆಲವು ಕೋರ್ಸುಗಳ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಗಳಿಂದ ನೊಂದಣಿ ಸಂಖ್ಯೆ ಬಂದಿರುವುದಿಲ್ಲವೆಂದು ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ. ಇದರಿಂದಾಗಿ ಹಲವಾರು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದ್ದು, ಈ ವಿಷಯದಲ್ಲಿ ಆಯಾ ಕಾಲೇಜುಗಳ ನೋಡಲ್ ಅಧಿಕಾರಿಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸಂಪರ್ಕಿಸಿ ವಿದ್ಯಾರ್ಥಿಗಳಿಗೆ ನೊಂದಣಿ ಸಂಖ್ಯೆ ಬರುವಂತೆ ಕ್ರಮ ಕೈಗೊಳ್ಳಬೇಕು, ನೊಂದಣಿ ಸಂಖ್ಯೆ ಬರುವವರೆವಿಗೂ ಕಾಯದೇ SSP ತಂತ್ರಾಂಕ್ಕೆ ಕಳುಹಿಸಿಕೊಡಲು ಉಲ್ಲೇಖಿತ ಸರ್ಕಾರಿ ನಡುವಳಿಯಲ್ಲಿ ಸೂಚಿಸಲಾಗಿದೆ.

**ಪು.ತಿ.ನೋ**

ಮುಂದುವರೆದು ಯಾವುದೇ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸದೇ ಇದ್ದಲ್ಲಿ ಕಾಲೇಜಿನ ಸಿಬ್ಬಂದಿಯವರನ್ನೇ ನೇರ ಹೊಣೆಗಾರಿಕೆ ಮಾಡಲಾಗುವುದೆಂದು ಹೆಚ್ಚರಿಕೆ ನೀಡಿದ್ದಾರೆ. ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳು ಕಾಲೇಜು ಮಾಹಿತಿ ವ್ಯವಸ್ಥೆ(CIS) ಪೋರ್ಟಲ್‌ನಲ್ಲಿ, ಕಾಲೇಜಿನಿಂದ ನೇಮಕಗೊಂಡಿರುವ ಸಬಲೀಕರಣ ಅಧಿಕಾರಿ(Empowerment Officer) ರವರ ಹೆಸರು, ಹುದ್ದೆ, ಮೊಬೈಲ್ ಸಂಖ್ಯೆ ಹಾಗೂ ಆಧಾರ್ ಕಾರ್ಡ್, ಇ-ಮೇಲ್ ಐಡಿ ಇತರೆ ಅಗತ್ಯ ದಾಖಲಾತಿಗಳನ್ನು ಪೋರ್ಟಲ್‌ನಲ್ಲಿ ಸಲ್ಲಿಸುವಂತೆ ಕ್ರಮವಹಿಸಲು ಸೂಚಿಸಿರುತ್ತಾರೆ.

ಈ ವಿಷಯದಲ್ಲಿ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರುಗಳು ತಮ್ಮ ವೈಯಕ್ತಿಕ ಗಮನವನ್ನು ಹರಿಸಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಸಕಾಲದಲ್ಲಿ ಅರ್ಜಿ ಸಲ್ಲಿಸಿ ವಿದ್ಯಾರ್ಥಿವೇತನ ಮಂಜೂರು ಆಗುವಂತೆ ಕ್ರಮವಹಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಕಾರ ಮಾಡಬೇಕೆಂದು ತಮ್ಮಲ್ಲಿ ಕೋರಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು(ಆ)

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ
ಬೆಂಗಳೂರು - 560 001

ಲಗತ್ತು: ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಿದ ಮಾರ್ಗಸೂಚಿ ಪ್ರತಿ:-

ಪ್ರತಿ:-

1. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ. ಸಂಪಂಗಿರಾಮನಗರ, ಬೆಂಗಳೂರು ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
2. ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ, ಬೆಂಗಳೂರು ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
3. ಡಾ.ಕೆ.ಆರ್.ಜಲಜ, ಸಹ ಪ್ರಾಧ್ಯಪಕರು, ವಾಣಿಜ್ಯ ವಿಭಾಗ, ಬೆಂ.ನ.ವಿ.ವಿ ರವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
4. ಕಛೇರಿ ಪ್ರತಿ